# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 123 (1142) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಅಡಗೂರ್ ಹೆಚ್ ವಿಶ್ವನಾಥ್ |
| ಉತ್ತರಿಸಬೇಕಾದ ದಿನಾಂಕ | : | 22.09.2022 |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರಮ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮಾತ್ರ ಇಲಾಖೆಗಳಲ್ಲಿ ಸಮರ್ಥ, ಅರ್ಹ ಹಾಗೂ ಹಿರಿತನವಿರುವ ಅಧಿಕಾರಿಗಳಿದ್ದರೂ, ಅನ್ಯ ಇಲಾಖೆಯ ಅಧಿಕಾರಿಗಳಿಂದ ಸರ್ಕಾರ ನಿಯೋಜನೆ ಮೇರೆಗೆ ಸೇವೆಗೆ ತೆಗೆದುಕೊಳ್ಳುತ್ತಿದೆಯೇ; | ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿನ ವಿವಿಧ ಇಲಾಖೆಗಳಿಗೆ ಅನ್ಯ ಇಲಾಖೆಯ ಅಧಿಕಾರಿಗಳನ್ನು ನಿಯೋಜನೆ ಮೇರೆಗೆ ನೇಮಿಸಿಕೊಳ್ಳಲು ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಗಳು (ನೇಮಕಾತಿ) ನಿಯಮಗಳು, 2019ರಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ತೆಗೆದುಕೊಳ್ಳಲಾಗುತ್ತಿದೆ. ಅಂತೆಯೇ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ 8 ಕೆ.ಎ.ಎಸ್ ಅಧಿಕಾರಿಗಳು ಹಾಗೂ 2 ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಅಧಿಕಾರಿಗಳು ಪ್ರಸ್ತುತ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ. |
| ಆ | ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳ ನಿಯೋಜನೆ ಅವಧಿ ಮುಗಿದರೂ ಕಾರ್ಯ ನಿರ್ವಹಿಸುತ್ತಿರುವಂತಹ ಅಧಿಕಾರಿಗಳ ಸಂಖ್ಯೆ ಎಷ್ಟು? (ಅಧಿಕಾರಿಗಳ ಹುದ್ದೆ ಮತ್ತು ಹೆಸರಿನೊಂದಿಗೆ ಮಾರ್ಚ್-2018 ರಿಂದ ಆಗಸ್ಟ್-2022 ರವರೆಗಿನ ಸಂಪೂರ್ಣ ವಿವರವನ್ನು ಒದಗಿಸುವುದು) | ನಿಯೋಜನೆ ಅವಧಿ ಮೀರಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಯಾವುದೇ ಪ್ರಕರಣ ಇರುವುದಿಲ್ಲ. |
| ಇ | ಕೆಲವು ಇಲಾಖೆಗಳ ನಿಯಮಾವಳಿ ಅನುಸಾರ ಇಲ್ಲದಿರುವ ಹುದ್ದೆ ಸೃಷ್ಟಿಸಿರುವುದು ನಿಜವೇ; ನಿಜವಾಗಿದ್ದಲ್ಲಿ, ವಿವಿಧ ಇಲಾಖೆಗಳಲ್ಲಿ ಹುದ್ದೆ ಸೃಷ್ಟಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವಿವರ ನೀಡುವುದು; | ಇಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ. |

| | | |
|---|---|---|
| ಈ | ಅನ್ಯ ಇಲಾಖೆಯಿಂದ ಎರವಲು ಸೇವೆ ಮೇಲೆ ಬಂದು ಆ ಹುದ್ದೆಯನ್ನು ಉನ್ನತೀಕರಿಸಿಕೊಂಡು ಆ ಹುದ್ದೆಯ ಕಾರ್ಯಭಾರ ಮತ್ತು ಕಾರ್ಯಕ್ಷಮತೆ ಹಾಗೂ ಅಧಿಕಾರ ವ್ಯಾಪ್ತಿಯಲ್ಲಿ ಯಾವುದೇ ವ್ಯತ್ಯಾಸವಿಲ್ಲದಿರುವ ಹುದ್ದೆಯನ್ನು ಪಡೆದಿರುವ ಅಧಿಕಾರಿಗಳ ಮಾಹಿತಿಯನ್ನು ಒದಗಿಸುವುದು; | ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿಯೇ ಮುಂಬಡ್ತಿಯನ್ನು ಪಡೆದ ಅಧಿಕಾರಿಗಳನ್ನು, ನಿಯಮಗಳಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ಉನ್ನತೀಕರಿಸಲಾದ ಹುದ್ದೆಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವಿವರ:-<br>1. ಶ್ರೀ ವಿಜಯ್ ಬಿ.ಪಿ.,ಕೆ.ಎ.ಎಸ್., (ಸೂಪರ್ ಟೈಮ್ ಸ್ಕೇಲ್), ಸರ್ಕಾರದ ಅಪರ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ.<br>2. ಶ್ರೀ ಸಂಗಪ್ಪ, ಕೆ.ಎ.ಎಸ್.,(ಆಯ್ಕೆ ಶ್ರೇಣಿ), ಸರ್ಕಾರದ ಜಂಟಿ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ. |
| ಉ | ಸರ್ಕಾರವು ಈ ರೀತಿಯಾಗಿ ನಿಯೋಜನೆ ಮಾಡುವುದರಿಂದ ಆದೇಶಗಳ ಸಂಖ್ಯೆ; DPAR 22 STR 2013, ಬೆಂಗಳೂರು ದಿನಂಕ:07.06.2013 ಮತ್ತು DPAR ಇಲಾಖೆಯಿಂದ ಆಯಾ ಇಲಾಖೆಗೆ ನೀಡಿರುವ ಆದೇಶ ಸಂಖ್ಯೆ: ಸಿಆಸುಇ 01 ಎಆರ್‌ಬಿ 2022, ಬೆಂಗಳೂರು ದಿನಾಂಕ:18.01.2022 ಇವುಗಳ ಉಲ್ಲಂಘನೆಯಾಗುವುದಿಲ್ಲವೇ; | ಉಲ್ಲಂಘನೆಯಾಗಿರುವುದಿಲ್ಲ. |
| ಊ | ಮಾತೃ ಇಲಾಖೆಗಳಲ್ಲಿ ಸಮರ್ಥ, ಅರ್ಹ ಹಾಗೂ ಹಿರಿತನವಿರುವ ಅಧಿಕಾರಿಗಳಿದ್ದರೂ ಅನ್ಯ ಇಲಾಖೆಯಿಂದ ನಿಯೋಜಿಸಿಕೊಂಡಲ್ಲಿ ಅನ್ಯ ಇಲಾಖೆಯಲ್ಲಿ ಇನ್ನೊಂದು ಹುದ್ದೆಯನ್ನು ಸೃಷ್ಟಿಸಿಕೊಂಡಂತಾಗುವುದಿಲ್ಲವೇ; ಇದರಿಂದ ಆರ್ಥಿಕ ವೆಚ್ಚ ದ್ವಿಗುಣವಾಗಿ ಮಾತೃ ಇಲಾಖೆಯ ಅಧಿಕಾರಿಗಳಿಗೆ ಅನ್ಯಾಯ ಮಾಡಿದಂತಾ ಗುವುದಿಲ್ಲವೇ, ಈ ಸಂಬಂಧ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳೆಷ್ಟು? (ನ್ಯಾಯಾಲಯದ ನಿರ್ದೇಶನ ಪಾಲಿಸಿದ ಪ್ರಕಣಗಳ ವಿವರ ಒದಗಿಸುವುದು) | ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಗಳು (ನೇಮಕಾತಿ) ನಿಯಮಗಳು, 2019 ರಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ನಿರ್ದಿಷ್ಟಪಡಿಸಿರುವ ನಿಯೋಜನೆ ಹುದ್ದೆಗಳೆದುರಿಗೆ ಅಧಿಕಾರಿಗಳನ್ನು ನಿಯೋಜನೆ ಮೇಲೆ ನೇಮಿಸಿಕೊಳ್ಳಲಾಗುತ್ತದೆ. ಇದರಿಂದಾಗಿ ಮಾತೃ ಇಲಾಖೆಗಳಲ್ಲಿ ಸಮರ್ಥ, ಅರ್ಹ ಹಾಗೂ ಹಿರಿತನವಿರುವ ಅಧಿಕಾರಿಗಳಿಗೆ ಯಾವುದೇ ಅನ್ಯಾಯವಾಗಲೀ ಹಾಗೂ ಸರ್ಕಾರಕ್ಕೆ ಆರ್ಥಿಕ ವೆಚ್ಚ ದ್ವಿಗುಣವಾದಂತಾಗುವುದಿಲ್ಲ.<br>ಈ ಸಂಬಂಧವಾಗಿ ಯಾವುದೇ ನ್ಯಾಯಾಲಯ ಪ್ರಕರಣ ದಾಖಲಾಗಿರುವುದಿಲ್ಲ. |

ಕಡತ ಸಂಖ್ಯೆ: **ಸಿಆಸುಇ 157 ರಾಸ 2022**

**(ಬಸವರಾಜ ಬೊಮ್ಮಾಯಿ)**
**ಮುಖ್ಯಮಂತ್ರಿ**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1142ಕ್ಕೆ ಪೂರಕ ಟಿಪ್ಪಣಿ:-**

**ಉತ್ತರ**

ಅ

ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿನ ವಿವಿಧ ಇಲಾಖೆಗಳಿಗೆ ಅನ್ಯ ಇಲಾಖೆಯ ಅಧಿಕಾರಿಗಳನ್ನು ನಿಯೋಜನೆ ಮೇರೆಗೆ ನೇಮಿಸಿಕೊಳ್ಳಲು ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಗಳು (ನೇಮಕಾತಿ) ನಿಯಮಗಳು, 2019 ರಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ತೆಗೆದುಕೊಳ್ಳಲಾಗುತ್ತಿದೆ. ಅಂತೆಯೇ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ 8 ಕೆ.ಎ.ಎಸ್ ಅಧಿಕಾರಿಗಳು (ಇಬ್ಬರು ಅಧೀನ ಕಾರ್ಯದರ್ಶಿ ಮತ್ತು ಆರು ಉಪ / ಜಂಟಿ / ಅಪರ ಕಾರ್ಯದರ್ಶಿ) ಹಾಗೂ 2 ರಾಜ್ಯ ಲೆಕ್ಕ ಪರಿಶೋಧನ ಮತ್ತು ಲೆಕ್ಕಪತ್ರ ಇಲಾಖೆಯ ಅಧಿಕಾರಿಗಳು ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಮುಂದುವರೆದು, ಸದರಿ ನಿಯಮಗಳನ್ವಯ ತಾಂತ್ರಿಕ ಹುದ್ದೆಗಳೆಂದು ಗುರುತಿಸಲ್ಪಟ್ಟ ಹುದ್ದೆಗಳಿಗೆ ತಾಂತ್ರಿಕ ಅಧಿಕಾರಿಗಳನ್ನೇ ನಿಯೋಜನೆ ಮೇಲೆ ನೇಮಿಸಲಾಗುತ್ತಿದೆ

ಸಚಿವಾಲಯದಲ್ಲಿ ನಿಯೋಜನೆ ಅವಧಿ ಮೀರಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಯಾವುದೇ ಪ್ರಕರಣ ಇರುವುದಿಲ್ಲ.

ಕೆಲವೊಂದು ಪ್ರಕರಣಗಳಲ್ಲಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿಯೇ ಮುಂಬಡ್ತಿಯನ್ನು ಪಡೆದ ಅಧಿಕಾರಿಗಳನ್ನು ನಿಯಮಗಳಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ಉನ್ನತೀಕರಿಸಲಾದ ಹುದ್ದೆಗಳಲ್ಲಿ ಮುಂದುವರೆಸಲಾಗಿರುತ್ತದೆ. ಮುಂದುವರೆಸಲಾಗಿರುವ ಅಧಿಕಾರಿಗಳ ವಿವರ ಈ ಕೆಳಕಂಡಂತಿದೆ:-

1. ಶ್ರೀ ವಿಜಯ್ ಬಿ.ಪಿ.,ಕೆ.ಎ.ಎಸ್., (ಸೂಪರ್ ಟೈಮ್ ಸ್ಕೇಲ್), ಸರ್ಕಾರದ ಅಪರ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ.

{ಸದರಿಯವರು ದಿನಾಂಕ: 12-04-2022 ರಿಂದ ಕೆ.ಎ.ಎಸ್. (ಆಯ್ಕೆ ಶ್ರೇಣಿ} ವೃಂದದಲ್ಲಿ ಸರ್ಕಾರದ ಜಂಟಿ ಕಾರ್ಯದರ್ಶಿ ವೃಂದದಲ್ಲಿ ಕರ್ತವ್ಯನಿರ್ವಹಿಸುತ್ತಿದ್ದು,, ಏತನ್ಮಧ್ಯೆ, ದಿನಾಂಕ: 31-05-2022 ರಂದು ಕೆ.ಎ.ಎಸ್., (ಸೂಪರ್ ಟೈಮ್ ಸ್ಕೇಲ್) ವೃಂದಕ್ಕೆ ಮುಂಬಡ್ತಿ ಹೊಂದಿದ ಕಾರಣ ಸದರಿಯವರು ಕಾರ್ಯನಿರ್ವಹಿಸುತ್ತಿದ್ದ ಸರ್ಕಾರದ ಜಂಟಿ ಕಾರ್ಯದರ್ಶಿ ಹುದ್ದೆಯನ್ನು ಸರ್ಕಾರದ ಅಪರ ಕಾರ್ಯದರ್ಶಿ ಹುದ್ದೆಯನ್ನಾಗಿ ಉನ್ನತೀಕರಿಸಿ, ಹಾಗೇ ಉನ್ನತೀಕರಿಸಿದ ಹುದ್ದೆಯಲ್ಲಿಯೇ ಮುಂದುವರೆಸಲಾಗಿದೆ.}

2. ಶ್ರೀ ಸಂಗಪ್ಪ, ಕೆ.ಎ.ಎಸ್.,(ಆಯ್ಕೆ ಶ್ರೇಣಿ), ಸರ್ಕಾರದ ಜಂಟಿ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

{ಸದರಿಯವರು ದಿನಾಂಕ: 18-03-2021 ರಿಂದ ಕೆ.ಎ.ಎಸ್. (ಹಿರಿಯ ಶ್ರೇಣಿ} ವೃಂದದಲ್ಲಿ ಸರ್ಕಾರದ ಉಪ ಕಾರ್ಯದರ್ಶಿ ವೃಂದದಲ್ಲಿ ಕರ್ತವ್ಯನಿರ್ವಹಿಸುತ್ತಿದ್ದು,, ಏತನ್ಮಧ್ಯೆ, ದಿನಾಂಕ: 31-05-2022 ರಂದು ಕೆ.ಎ.ಎಸ್., (ಆಯ್ಕೆ ಶ್ರೇಣಿ) ವೃಂದಕ್ಕೆ ಮುಂಬಡ್ತಿ ಹೊಂದಿದ ಕಾರಣ ಸದರಿಯವರು ಕಾರ್ಯನಿರ್ವಹಿಸುತ್ತಿದ್ದ ಸರ್ಕಾರದ ಉಪ ಕಾರ್ಯದರ್ಶಿ ಹುದ್ದೆಯನ್ನು ಸರ್ಕಾರದ ಜಂಟಿ ಕಾರ್ಯದರ್ಶಿ ಹುದ್ದೆಯನ್ನಾಗಿ ಉನ್ನತೀಕರಿಸಿ, ಹಾಗೇ ಉನ್ನತೀಕರಿಸಿದ ಹುದ್ದೆಯಲ್ಲಿಯೇ ಮುಂದುವರೆಸಲಾಗಿದೆ.}

ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಸರ್ಕಾರದ ಆದೇಶ ಸಂಖ್ಯೆ; DPAR 22 STR 2013, ದಿನಾಂಕ: 07.06.2013 ಹಾಗೂ ಸುತ್ತೋಲೆ ಸಂಖ್ಯೆ: ಸಿಆಸುಇ 01 ಎಆರ್‌ಬಿ 2022, ದಿನಾಂಕ: 18.01.2022 – ಇವುಗಳು ಕ್ರಮವಾಗಿ ಸರ್ಕಾರಿ ನೌಕರರ ವರ್ಗಾವಣೆ ಮಾರ್ಗಸೂಚಿ ಹಾಗೂ ಇಲಾಖಾ ಮುಖ್ಯಸ್ಥರ ದರ್ಜೆಯ ಅಧಿಕಾರಿಗಳ ಸೇವಾ ವಿಷಯಗಳ ನಿರ್ವಹಣೆ ಕುರಿತಾಗಿರುವುದರಿಂದ, ಇವುಗಳಿಗೆ ಸಂಬಂಧಿಸಿದಂತೆ ಯಾವುದೇ ಉಲ್ಲಂಘನೆಯಾಗಿರುವುದಿಲ್ಲ

ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಗಳು (ನೇಮಕಾತಿ) ನಿಯಮಗಳು, 2019 ರಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ನಿರ್ದಿಷ್ಟಪಡಿಸಿರುವ ನಿಯೋಜನೆ ಹುದ್ದೆಗಳೆದುರಿಗೆ ಅಧಿಕಾರಿಗಳನ್ನು ನಿಯೋಜನೆ ಮೇಲೆ ನೇಮಿಸಿಕೊಳ್ಳಲಾಗುತ್ತದೆ. ಇದರಿಂದಾಗಿ ಮಾತೃ ಇಲಾಖೆಗಳಲ್ಲಿ ಸಮರ್ಥ, ಅರ್ಹ ಹಾಗೂ ಹಿರಿತನವಿರುವ ಅಧಿಕಾರಿಗಳಿಗೆ ಯಾವುದೇ ಅನ್ಯಾಯವಾಗಲೀ ಹಾಗೂ ಸರ್ಕಾರಕ್ಕೆ ಆರ್ಥಿಕ ವೆಚ್ಚ ದ್ವಿಗುಣವಾದಂತಾಗುವುದಿಲ್ಲ.

ಈ ಕಾರಣದಿಂದಾಗಿ ಯಾವುದೇ ನ್ಯಾಯಾಲಯ ಪ್ರಕರಣ ದಾಖಲಾಗಿರುವುದಿಲ್ಲ.